
# ಕಲೆ ಮತ್ತು ಪರಿಸರ

ಮಾಳವಿಕಾ ರಾಜ್‌ನಾರಾಯಣ್

ಮಲಯಾಳಂನ 'ಒಟ್ಟಾಲ್' (2014, ನಿರ್ದೇಶನ – ಜಯರಾಜ್) ಚಿತ್ರದಲ್ಲಿ, ಇಬ್ಬರು ಪುಟ್ಟ ಹುಡುಗರ ಜೀವನವನ್ನು ಚಿತ್ರಿಸಲಾಗಿದೆ. ಅವರಲ್ಲಿ ಒಬ್ಬ ಕುಟ್ಟಪಾಯಿ, ಬಡ ಹುಡುಗ. ಹಿನ್ನೀರಲ್ಲಿ ಬಾತುಕೋಳಿಗಳನ್ನು ಸಾಕುವ ವಯಸ್ಸಾದ ಅಜ್ಜನ ಜೊತೆಯಲ್ಲಿ ಬೆಳೆದವನು; ಮತ್ತು ಇನ್ನೊಬ್ಬ ಹುಡುಗ ಶ್ರೀಮಂತ ಕುಟುಂಬಕ್ಕೆ ಸೇರಿದ ಟಿಂಕು; ಸ್ಥಳೀಯ ಖಾಸಗಿ ಶಾಲೆಯಲ್ಲಿ ಓದುತ್ತಾನೆ. ಕುಟ್ಟಪಾಯಿ ಶಾಲೆಗೆ ಹೋಗುವುದಿಲ್ಲವಾದರೂ ಬಾತುಕೋಳಿಗಳು, ಸಸ್ಯಗಳು, ಮರಗಳು, ಪಕ್ಷಿಗಳು ಮತ್ತು ಚಿಟ್ಟೆಗಳ ಬಗ್ಗೆ ಅಪಾರವಾಗಿ ತಿಳಿದುಕೊಂಡಿದ್ದಾನೆ. ದಿನವೂ ಅವುಗಳೊಡನೆ ಒಡನಾಡುತ್ತಾ ಅವುಗಳ ಜೀವನವನ್ನು ಸೂಕ್ಷ್ಮವಾಗಿ ಗಮನಿಸಿದ್ದಾನೆ. ಅದರೊಂದಿಗೆ ಅಸಂಖ್ಯಾತ ಪ್ರಶ್ನೆಗಳಿಗೆಲ್ಲ ತಾಳ್ಮೆಯಿಂದ ಉತ್ತರಿಸುವ ಅಜ್ಜನಿಂದಲೂ ಅಪಾರ ಜ್ಞಾನವನ್ನು ಪಡೆದುಕೊಂಡಿದ್ದಾನೆ. ಮತ್ತೊಂದೆಡೆ ಟಿಂಕು ತನ್ನ ಶಾಲಾ ಪಠ್ಯಗಳ ಜೊತೆಗೆ ಅರ್ಥಪೂರ್ಣ ಸಂಬಂಧದ ಕೊರತೆ ಹಾಗೂ ಬೇಸರದ ವಾತಾವರಣದಿಂದಾಗಿ ಕಷ್ಟಪಡುತ್ತಾನೆ. ಆದರೆ ಅವನಿಗೆ ಸಿಕ್ಕ ಕುಟ್ಟಪಾಯಿಯ ಸ್ನೇಹವು ಸಂಪೂರ್ಣ ಹೊಸ ಆವಿಷ್ಕಾರಗಳ ಜಗತ್ತನ್ನು ತೆರೆಯುತ್ತದೆಯಲ್ಲದೆ, ಶಾಲೆಯ ಅನಾಸಕ್ತ ದಿನಚರಿಯಿಂದ ಹೊರಬಂದು, ಇಡೀ ದಿನವನ್ನು ಹೊರಜಗತ್ತಲ್ಲಿ ಕಳೆಯಲು ಆಕರ್ಷಿಸುತ್ತದೆ. ಕುಟ್ಟಪಾಯಿಯನ್ನು ಪಟಾಕಿ ತಯಾರಿಕಾ ಘಟಕದಲ್ಲಿ ಕೆಲಸ ಮಾಡಲು ಕಳುಹಿಸಿದಾಗ ಕಥೆಯು ವಿಷಾದ ಅಂತ್ಯ ಕಾಣುತ್ತದೆ. ಇಡೀ ಚಿತ್ರದ ಸಾರವು ಪ್ರಕೃತಿಯ ಸೌಂದರ್ಯ ಮತ್ತು ಅದ್ಭುತಗಳಲ್ಲಿ ದೃಢವಾಗಿ ನೆಲೆಗೊಂಡಿದೆ – ಚಿತ್ರದ ಪ್ರತಿ ದೃಶ್ಯವೂ ಹಿನ್ನೀರಿನ ಕಲರವ ಹಾಗೂ ದೃಶ್ಯ ವೈಭವಗಳನ್ನು ನಾವೇ ಖುದ್ದು ಅನುಭವಿಸುವಂತೆ ಮಾಡುತ್ತದೆ ಮತ್ತು ಕುಟ್ಟಪಾಯಿಯನ್ನು ನಮ್ಮೊಳಗೆಯೇ ಕಂಡುಕೊಳ್ಳುವಂತೆ ಮನವೊಲಿಸುತ್ತದೆ.

## ಪರಿಸರವನ್ನು ತರಗತಿಯೊಳಗೇ ತರುವುದು

ಉತ್ತರಕಾಶಿಯ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಆರಂಭಿಕ ಬಾಲ್ಯ ಶಿಕ್ಷಣ (Early Childhood Education - ECE) ತರಗತಿಯೊಂದರಲ್ಲಿ, ನಾಲ್ಕು ವರ್ಷ ವಯಸ್ಸಿನ ಮಕ್ಕಳು ಬಿಡಿಸಿದ ಪ್ರಾಣಿಗಳ ರೇಖಾಚಿತ್ರಗಳನ್ನು ಪ್ರದರ್ಶಿಸಲಾಯಿತು (ಚಿತ್ರ 1 ಮತ್ತು 2), ಪ್ರತಿಯೊಂದಕ್ಕೂ ಶಿಕ್ಷಕರು ಹೆಸರು ಬರೆದಿದ್ದಾರೆ. ತರಗತಿಯಲ್ಲಿ ಕಲೆಯನ್ನು ಸಂಯೋಜಿಸುವ ನಿಟ್ಟಿನಲ್ಲಿ ಈ ಪ್ರಯತ್ನ ಗಮನಾರ್ಹ ಉದಾಹರಣೆಯಾಗಿ ನಿಲ್ಲಲು ಹಲವಾರು ಕಾರಣಗಳಿವೆ. ಆರಂಭಿಕ ವರ್ಷಗಳಲ್ಲಿ, ಮಕ್ಕಳು ಬಿಡಿಸುವ ಎಲ್ಲಾ ರೇಖಾಚಿತ್ರಗಳನ್ನು, ಉಚಿತ ಅಭಿವ್ಯಕ್ತಿ ಮತ್ತು ಸಂವಹನದ ರೂಪಗಳೆಂದು ಪರಿಗಣಿಸಲಾಗುತ್ತದೆ. ಈ ಸಂದರ್ಭದಲ್ಲಿ, ಈ ಪ್ರದರ್ಶನವು ನಿರ್ವಹಿಸಿದ ಪಾತ್ರವನ್ನೂ ಒಂದು ಕಲೆ ಎಂದು ಪರಿಗಣಿಸಬಹುದು; ಕಾರಣ, ವಿಭಿನ್ನ ಒಳನೋಟಗಳುಳ್ಳ ಬೇರೆಬೇರೆ ಮಕ್ಕಳು; ತಮ್ಮದೇ ಗ್ರಹಿಕೆ, ಕಲ್ಪನೆಗಳಿಂದ ಚಿತ್ರಿಸಿದ ಈ ಪ್ರಾಣಿಗಳನ್ನು ಕಂಡು, ನೋಡುಗರು 'ಇವು ಎಷ್ಟು ವೈವಿಧ್ಯವಾಗಿವೆ?' ಎಂಬ ಉದ್ಗಾರ ಎತ್ತಬಹುದು. ಹೀಗೆ ಊಹಿಸಿ-ಕೊಳ್ಳೋಣ; ಮಕ್ಕಳು ಈ ರೇಖಾಚಿತ್ರಗಳನ್ನು ರಚಿಸಿದ್ದಾರೆ, ಆದರೆ ಅವುಗಳನ್ನು ಪ್ರದರ್ಶಿಸುತ್ತಿಲ್ಲ, ತಮ್ಮ ರೇಖಾಚಿತ್ರಗಳ ಬದಲಿಗೆ ಅವುಗಳ ಜಾಗದಲ್ಲಿ ಗಾಢ ಬಣ್ಣಗಳ ಮುದ್ರಿತ ಪ್ರಾಣಿಗಳ ಚಿತ್ರಗಳನ್ನೇ ಯಾವಾಗಲೂ ಪ್ರದರ್ಶಿಸಿದರೆ? ಇಂತಹ ಪ್ರದರ್ಶನಗಳು ಕ್ರಮೇಣ ಮಕ್ಕಳ ಕಲ್ಪನೆಯನ್ನು ಚಾರ್ಟ್‌ನಲ್ಲಿ ಕಂಡುಬರುವ ಚಿತ್ರಗಳಿಗೆ ಮತ್ತು ಹೆಚ್ಚೆಂದರೆ ಕೆಲವು ಪಠ್ಯಪುಸ್ತಕಗಳು ಮತ್ತು ಕಥೆಪುಸ್ತಕಗಳಲ್ಲಿ ಕಂಡುಬರುವ ಚಿತ್ರಗಳಿಗಷ್ಟೇ ಸೀಮಿತಗೊಳಿಸುತ್ತವೆ. ಅವರು ಕ್ರಮೇಣ ತಮ್ಮ ಕುದುರೆಗಳು, ಹಸುಗಳು, ನಾಯಿಗಳು, ಹಂದಿಗಳು, ಹುಲಿಗಳು ಮತ್ತು ಇಲಿಗಳ ರೇಖಾಚಿತ್ರಗಳನ್ನು ಜನಪ್ರಿಯ ಕಲ್ಪನೆಯ ಮಾದರಿಯಲ್ಲಿ ಚಿತ್ರಿಸಿದ ರೀತಿಯೇ ರೂಪಿಸಲು ಆರಂಭಿಸುತ್ತಾರೆ. ರೂಢಿಯಿಂದ ಹೊರಗುಳಿಯುವ ಪ್ರಾಣಿಗಳ ಯಾವುದೇ ಪ್ರಾತಿನಿಧ್ಯವು ಅವರಿಗೆ ಅನನುಕೂಲ ಅಥವಾ ಗೊಂದಲವನ್ನು ಉಂಟುಮಾಡುತ್ತದೆ ಅಥವಾ ಇನ್ನೂ ಕೆಟ್ಟ ಪರಿಣಾಮವನ್ನು ಉಂಟುಮಾಡುತ್ತದೆ ಮತ್ತು ಮುಂದುವರಿದು ಅದನ್ನು 'ದೋಷಪೂರಿತ' ಎಂದು ಗ್ರಹಿಸಲಾಗುತ್ತದೆ.




ಚಿತ್ರ 1 ಮತ್ತು 2: 4ನೇ ವಯಸ್ಸಿನ ಮಕ್ಕಳು ಬಿಡಿಸಿದ ಪ್ರಾಣಿಗಳ ಚಿತ್ರಗಳು




ಚಿಕ್ಕ ವಯಸ್ಸಿಂದಲೇ, ಮಕ್ಕಳಿಗೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ನೈಜ ಜೀವನದ ಜೊತೆಗೆ ನೈಸರ್ಗಿಕ ಪ್ರಪಂಚದ ವಿವಿಧ ಕಲಾತ್ಮಕ ಪ್ರಾತಿನಿಧ್ಯಗಳಿಗೆ ಒಡ್ಡಬೇಕು ಹಾಗೂ ಸಾಧ್ಯವಾದಲ್ಲೆಲ್ಲ ಪ್ರಾಣಿಗಳ ನೈಜ ಆವಾಸಸ್ಥಾನಗಳು ಮತ್ತು ನಡವಳಿಕೆಗಳನ್ನು ಅಧಿಕೃತ ರೀತಿಯಲ್ಲಿ ಸೆರೆಹಿಡಿಯುವ ವೀಡಿಯೊ ಸಾಕ್ಷ್ಯಚಿತ್ರಗಳನ್ನು ನೋಡುವಂತಾಗಬೇಕು. ಪ್ರಾಣಿಗಳ ಜಾನಪದ ವರ್ಣಚಿತ್ರಗಳು, ವಿವಿಧ ಕಲಾವಿದರ ರೇಖಾಚಿತ್ರಗಳು, ಛಾಯಾಗ್ರಾಹಕರಿಂದ ವಿಭಿನ್ನ ಕೋನಗಳಲ್ಲಿ ಸೆರೆಹಿಡಿಯಲ್ಪಟ್ಟ ಪ್ರಾಣಿಗಳ ಅನನ್ಯ ಛಾಯಾಚಿತ್ರಗಳು – ಇವೆಲ್ಲವೂ ಮಕ್ಕಳ ಕಲ್ಪನೆ ಮತ್ತು ಭಾವನಾತ್ಮಕ ಪ್ರತಿಕ್ರಿಯೆಗಳನ್ನು ಉದ್ದೀಪಿಸುವ ಅಮೂಲ್ಯ ಮೂಲಗಳಾಗಿವೆ. ಅಂತಹ ಕಲಾತ್ಮಕ ಅಭಿವ್ಯಕ್ತಿಯ ವೈವಿಧ್ಯತೆಯನ್ನು ತರಗತಿಯಲ್ಲಿ ಹಂಚಿಕೊಂಡಾಗ ಮತ್ತು ಚರ್ಚಿಸಿದಾಗ, ಮಕ್ಕಳು ತಮ್ಮದೇ ಆದ ಪರಿಸರದಲ್ಲಿ ವೈವಿಧ್ಯತೆ ಮತ್ತು ಸೂಕ್ಷ್ಮ ವ್ಯತ್ಯಾಸಗಳನ್ನು ಗ್ರಹಿಸುವಷ್ಟು ಸಂವೇದನಾಶೀಲರಾಗುತ್ತಾರೆ.

## ಅವಕಾಶಗಳನ್ನು ಸೃಷ್ಟಿಸುವುದು

ಪರಿಸರದ ಅರಿವು ಮೂಡಿಸಲು ಕಲೆಗಳನ್ನು ಕಲಿಕೆಯ ಅನುಭವಕ್ಕೆ ಸೇರಿಸುವ ಬಗೆ ಹೇಗೆಂಬುದನ್ನು ನಿರ್ಧರಿಸುವಲ್ಲಿ ಶಾಲೆಗಳು ಅನೇಕ ಸವಾಲುಗಳನ್ನು ಎದುರಿಸುತ್ತವೆ. ಕಲೆಗಳನ್ನು ಸಾಂಸ್ಕೃತಿಕ 'ಮನರಂಜನೆ'ಗೆ ಸೀಮಿತಗೊಳಿಸುತ್ತಿರುವುದು ಒಂದು ಸಮಸ್ಯೆಯಾದರೆ, ಇನ್ನೊಂದು ಸಮಸ್ಯೆ ಪ್ರಕೃತಿಯೊಂದಿಗೆ ಕ್ಷೀಣಿಸುತ್ತಿರುವ ಮನುಷ್ಯ ಸಂಬಂಧ ಕಲೆ ಎಂಬುದು ಸಾವಿರಾರು ವರ್ಷಗಳಿಂದ ಪ್ರಕೃತಿಯೊಂದಿಗೆ ನಾವು ಹೊಂದಿರುವ ಅವಿನಾಭಾವ ಸಂಬಂಧದಿಂದ ಹೊರಹೊಮ್ಮಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಕಲೆಯೊಂದಿಗಿನ ಅಂತರ ಪ್ರಕೃತಿಯೊಂದಿಗಿನ ಆಸಕ್ತಿಯನ್ನು ಕಳೆದುಕೊಳ್ಳುವಂತೆ ಮಾಡುತ್ತದೆ. ಹಾಗೆಯೇ ಪ್ರಕೃತಿಯೊಂದಿಗಿನ ಅಂತರ ಕೂಡ ಕಲೆಯೆಡೆಗಿನ ಆಸಕ್ತಿಯನ್ನು ಕಡಿಮೆ ಮಾಡುತ್ತದೆ. ಮತ್ತೊಂದು ಸವಾಲು, ನಾವು ಶಾಲೆಯ ಪರಿಸರ ಮತ್ತು ದೈನಂದಿನ ಚಟುವಟಿಕೆಗಳನ್ನು ಹೇಗೆ ವಿನ್ಯಾಸಗೊಳಿಸುತ್ತೇವೆ

ಎಂಬುದರಲ್ಲಿರುತ್ತದೆ – ಕಲಿಕಾರ್ಥಿಗಳಿಗೆ ವಿವಿಧ ರೀತಿಯ ಮರಗಳು ಹಾಗೂ ಸಸ್ಯಗಳ ಕುರಿತ ತಿಳುವಳಿಕೆಗೆ ಸಾಕಷ್ಟು ಅವಕಾಶಗಳು ಇವೆಯೇ? ತಮ್ಮ ದೈನಂದಿನ ಕಲಿಕೆಯ ಭಾಗವಾಗಿ ಸಸ್ಯ ಹಾಗೂ ಪ್ರಾಣಿಗಳನ್ನು ಪೋಷಿಸಲು ಅವರನ್ನು ಪ್ರೋತ್ಸಾಹಿಸಲಾಗುತ್ತದೆಯೇ? ಪ್ರಪಂಚದ ನೈಸರ್ಗಿಕ ಅದ್ಭುತಗಳನ್ನು ಅನ್ವೇಷಿಸಲು ಮತ್ತು ಅದಕ್ಕಾಗಿ ಸಾಕಷ್ಟು ಸಮಯವನ್ನು ಹೊರಾಂಗಣದಲ್ಲಿ ವಿನಿಯೋಗಿಸಲು ಹಾಗೂ ತಮ್ಮ ಸಂಶೋಧನೆಗಳನ್ನು ತರಗತಿಯಲ್ಲಿ ಇತರರೊಂದಿಗೆ ಹಂಚಿಕೊಳ್ಳಲು ಅವರಿಗೆ ಅವಕಾಶವಿದೆಯೇ? ಮಕ್ಕಳ ಸೃಜನಶೀಲ ಕಲ್ಪನೆಗಳು, ಆಲೋಚನೆಗಳು ಮತ್ತು ಅಭಿವ್ಯಕ್ತಿಗಳನ್ನು ಮೆಚ್ಚಿ ಪ್ರೋತ್ಸಾಹಿಸಲಾಗುತ್ತಿದೆಯೇ?

## ಶಿಕ್ಷಕರು ಏನು ಮಾಡಬಹುದು

1. ಅನೇಕ ಶಿಕ್ಷಕರು ಕಲಿಕೆ, ಅನುಭವದ ಮೂಲಕ ಕಲಿಕೆ, ಪ್ರಾಯೋಗಿಕ ಕಲಿಕೆಗಳ ಮಾಡಿ ನೋಡು ಶಿಕ್ಷಣವನ್ನು ಅಳವಡಿಸಲು ಪ್ರಯತ್ನಿಸುತ್ತಾರೆ. ಆದರೆ ವಾಸ್ತವವಾಗಿ ಆಯ್ಕೆ ಮಾಡಿದ ಚಟುವಟಿಕೆಗಳಿಂದ ಮಕ್ಕಳಿಗೆ ಅಪೇಕ್ಷಿತ ಕಲಿಕಾ ಅನುಭವಗಳು ಉಂಟಾಗುತ್ತಿವೆಯೇ ಎಂಬುದನ್ನು ನಾವು ನಿಕಟವಾಗಿ ಪರಿಶೀಲಿಸಬೇಕಾಗಬಹುದು. ಕೆಲವು ಪರಿಸರದ ವಿಷಯಗಳನ್ನು ಕಲೆ– ಸಂಯೋಜಿತ ವಿಧಾನದೊಂದಿಗೆ ಹೇಗೆ ಯೋಜಿಸಬಹುದು ಎಂಬುದಕ್ಕೆ ಕೆಲವು ಉದಾಹರಣೆಗಳನ್ನು ನೋಡೋಣ. ಅನುಭವಾತ್ಮಕ ಕಲಿಕೆಗೆ ಸಾಧನವಾಗಿ ಬಳಸಲಾಗುವ ಕಲೆಯ ಕೆಲವು ಸಾಧ್ಯತೆಗಳು ಇಲ್ಲಿವೆ:

   ನೀರು ನಮಗೆ ಮೂಲಭೂತ ಹಾಗೂ ಜೀವನದ ಅಗತ್ಯ ಎಂಬ ಕುರಿತು 4ನೇ ತರಗತಿಯಲ್ಲಿ ಚರ್ಚೆ ನಡೆಯುತ್ತಿರುವುದನ್ನು ಕಲ್ಪಿಸಿಕೊಳ್ಳೋಣ. ಮಾಲಿನ್ಯದಿಂದ ಉಂಟಾಗುವ ಸಮಸ್ಯೆಗಳ ಕುರಿತು ಚರ್ಚಿಸಲು ಹಾಗೂ ಮಾತನಾಡಲು ಶಿಕ್ಷಕರು ವಿದ್ಯಾರ್ಥಿಗಳನ್ನು ಉತ್ತೇಜಿಸುತ್ತಾರೆ. ಆ ಸಮಸ್ಯೆಯ ನಿವಾರಣೆಗೆ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆಯೂ ಚರ್ಚೆ ನಡೆಯುತ್ತದೆ. ಒಂದು ಕಲಾ ಚಟುವಟಿಕೆಯಾಗಿ; ಮಾಲಿನ್ಯದ ಕುರಿತು ಜಾಗೃತಿ ಮೂಡಿಸಲು ತಮ್ಮ ಸ್ವಂತ ಕಲ್ಪನೆಯಿಂದಲೇ ಭಿತ್ತಿಪತ್ರಗಳು, ಕವಿತೆಗಳು ಮತ್ತು ಕಥೆಗಳನ್ನು ರಚಿಸಿ ಅವುಗಳನ್ನು ತಮ್ಮ ತರಗತಿ ಕೊಠಡಿ ಅಥವಾ ಶಾಲೆಯ ಆವರಣದಲ್ಲಿ ಪ್ರದರ್ಶಿಸಲು ಉತ್ತೇಜಿಸಲಾಗುತ್ತದೆ. ಇಲ್ಲಿ ಮಕ್ಕಳು ಕಲಿಯಲು ಮತ್ತು ಕಲಾಕೃತಿಗಳನ್ನು ರಚಿಸಲು ತಮ್ಮ ಸ್ವಂತ ಗಮನಿಸುವಿಕೆ ಹಾಗೂ ಅನುಭವಗಳನ್ನು ಆಧಾರವಾಗಿ ಬಳಸುತ್ತಾರೆ. ಕಲಾ ರಚನಾ ಪ್ರಕ್ರಿಯೆಯೂ ಸಹ ಅವರಿಗೆ ಆನಂದದಾಯಕ ಹಾಗೂ ಅವರು ಕಲಿಯುವ ವಿಷಯಗಳಿಗೆ ಸದೃಢ ಸಂಪರ್ಕಗಳನ್ನು ಸ್ಥಾಪಿಸುವ ಸ್ಮರಣೀಯ ವೇದಿಕೆಯಾಗಿರುತ್ತದೆ. ಆದಾಗ್ಯೂ ಶಿಕ್ಷಕರು, ಕಲಿಕೆಯು ತರಗತಿಯ ಆಚೆಗೂ ವಿಸ್ತರಿಸುವಂತೆ ನೋಡಿಕೊಳ್ಳಬೇಕಾಗುತ್ತದೆ ಮತ್ತು ಅದು ಮಕ್ಕಳ ದೈನಂದಿನ ಜೀವನದಲ್ಲಿ ವರ್ತನೆಯ ಬದಲಾವಣೆ (behavioural change) ಹಾಗೂ ಜಾಗೃತಿಯನ್ನು ತರುವಂತೆಯೂ ಅದನ್ನು ಉತ್ತೇಜಿಸಬೇಕಾಗುತ್ತದೆ.

2. 5ನೇ ತರಗತಿಯಲ್ಲಿ, ಮಕ್ಕಳಿಗೆ ಗುಂಪು ಚಟುವಟಿಕೆಗಳನ್ನು ನೀಡಿ, ಅಲ್ಲಿ ಅವರು ತಮ್ಮದೇ ಶಾಲೆ, ನೆರೆಹೊರೆ ಅಥವಾ ಗ್ರಾಮದ ಸಮೀಕ್ಷೆ ನಡೆಸಿ ಸ್ಥಳೀಯ ಪರಿಸರದಲ್ಲಿನ ವಿವಿಧ ಆಯಾಮಗಳ ಕುರಿತು ಅಧ್ಯಯನ ಮಾಡುವಂತೆ ನಿಯೋಜಿಸಬಹುದು, ಅವುಗಳಲ್ಲಿ ಕೆಲವು ಹೀಗಿರಬಹುದು:

- ಬೀಡಾಡಿ ಪ್ರಾಣಿಗಳ ಸಂಖ್ಯೆ ಮತ್ತು ಅವುಗಳ ಆರೈಕೆ ಮತ್ತು ಯೋಗಕ್ಷೇಮ
- ಸ್ಥಳೀಯವಾಗಿರುವ ನೀರಿನ ನೈಸರ್ಗಿಕ ಮೂಲಗಳು, ಅದರ ಸಂಗ್ರಹಣೆ, ವಿತರಣೆ ಮತ್ತು ಬಳಕೆ
- ತ್ಯಾಜ್ಯ ಸಂಗ್ರಹಣೆ, ನಿರ್ವಹಣೆ ಮತ್ತು ವಿಲೇವಾರಿ ಅಭ್ಯಾಸಗಳು

ಸಮೀಕ್ಷೆಯ ಬಳಿಕ ಸಂಗ್ರಹಿಸಿದ ವಿವರಗಳಿಂದ, ತಮ್ಮ ಕಲಿಕೆಯನ್ನು ಪ್ರಸ್ತುತಪಡಿಸುವ ಸೃಜನಶೀಲ ವಿಧಾನಗಳನ್ನು ಅಭಿವೃದ್ಧಿಪಡಿಸಲು ಗುಂಪುಗಳನ್ನು ಕೇಳಬಹುದು. ಕೆಲವು ಮಕ್ಕಳು ಚಿತ್ರಗಳು ಮತ್ತು ಪ್ರಮುಖ ಮುಖ್ಯಾಂಶಗಳೊಂದಿಗೆ ಚಿತ್ರವನ್ನು ಅಲಂಕರಿಸಬಹುದು ಅಥವಾ ನಕ್ಷೆಗಳನ್ನು ರಚಿಸಬಹುದು; ಕೆಲವರು ಕಥೆಯನ್ನು ಬರೆದು, ಅದನ್ನು ನಾಟಕವಾಗಿ ಪ್ರದರ್ಶಿಸಬಹುದು, ಇನ್ನು ಕೆಲವರು ಕಾಲ್ಪನಿಕ ಆದರ್ಶ ನೆರೆಹೊರೆಯ 3 ಮಾದರಿಯನ್ನು ರಚಿಸಬಹುದು, ಮತ್ತೂ ಕೆಲವರು ರೇಖಾಚಿತ್ರ ಅಥವಾ ವರ್ಣಚಿತ್ರಗಳನ್ನು ಮಾಡಬಹುದು. ಅನುಭವದ ಕಲಿಕೆಯ ಅಂಶವು ಇಲ್ಲಿ ಹೆಚ್ಚು ಪರಿಣಾಮಕಾರಿಯಾಗಿರಬಹುದು. ಏಕೆಂದರೆ ಕಲಿಯುವವರು ಸಮೀಕ್ಷೆಯ ಮೂಲಕ ತಮ್ಮದೇ ಜೀವನ ಪರಿಸರದ ಆಳವಾದ ಪರೀಕ್ಷೆಯಲ್ಲಿ ತೊಡಗುತ್ತಾರೆ ಮತ್ತು ಅವಕಾಶ ನೀಡಿದಲ್ಲಿ ಅದನ್ನು ಪುನರ್–ಕಲ್ಪಿಸಿಕೊಳ್ಳಬಹುದು ಮತ್ತು ಸೃಜನಶೀಲ / ಕಲಾ ಪ್ರಕ್ರಿಯೆಯ ಮೂಲಕ ಪರಿಹಾರಗಳು ಮತ್ತು ಮಾದರಿಗಳನ್ನು ಪ್ರಸ್ತಾಪಿಸಬಹುದು.ಸಂಗೀತ ಹಾಗೂ ಶಬ್ದದೊಂದಿಗಿನ ಸರಳ ಧ್ವನಿಪ್ರಯೋಗಗಳು ಪರಿಸರದ ಕಡೆಗೆ ಮಕ್ಕಳನ್ನು ಸಂವೇದನಾಶೀಲಗೊಳಿಸುವ ಮತ್ತು ಆಸಕ್ತಿಯನ್ನು ಬೆಳೆಸುವ ಇತರ ವಿಧಾನಗಳಾಗಿರಬಹುದು. ಮಕ್ಕಳಿಗೆ ಪ್ರಾಣಿಗಳ, ವಿವಿಧ ಬಗೆಯ ಪಕ್ಷಿಗಳ, ಮಳೆಯ, ನೀರಿನ, ಗುಡುಗು ಮತ್ತು ಗಾಳಿಯ ಶಬ್ದಗಳನ್ನು ಆಲಿಸುವಂತೆ ಮಾಡಬಹುದು. ನಂತರ ಅವರು ಅಂತಹ ಕೆಲವು ಶಬ್ದಗಳನ್ನು ಪುನರುತ್ಪಾದಿಸಲು ಹಾಗೂ ಪಾತ್ರಾಭಿನಯದ ಚಟುವಟಿಕೆಗಳಲ್ಲಿ ಅವುಗಳ ಚಲನೆಗಳನ್ನೂ ಅನುಕರಿಸಲು ಪ್ರಯತ್ನಿಸಬಹುದು. ಇದು ಇತರ ಜೀವಿಗಳ ಬಗ್ಗೆ ಅನುಕಂಪ ಮತ್ತು ಸಹಾನುಭೂತಿಯನ್ನು ಬೆಳೆಸುವ ಹಾಗೂ ಪರಿಸರದಲ್ಲಿನ ಸೂಕ್ಷ್ಮ, ಸಮತೋಲಿತ ಸಹಬಾಳ್ವೆಯನ್ನು

ಗಮನಿಸುವ ಅತ್ಯಂತ ಶಕ್ತಿಯುತ ವಿಧಾನವಾಗಿದೆ..ಕಲಿಕೆಗೆ ಸಾಕಷ್ಟು ಮುದ್ರಿತ ಸಾಮಗ್ರಿಗಳುಳ್ಳ ಪರಿಸರವನ್ನು (printrich environment) ಸೃಷ್ಟಿಸುವುದು ಎಷ್ಟು ಮುಖ್ಯವೋ, ಎಲ್ಲಾ ಇಂದ್ರಿಯಗಳನ್ನು ಉತ್ತೇಜಿಸುವಂತೆ ಕಲಾತ್ಮಕವಾಗಿ ಆಹ್ಲಾದಕರ ವಾತಾವರಣವನ್ನು ಸೃಷ್ಟಿಸುವುದು ಮಕ್ಕಳ ಮೇಲೆ ಬಹಳ ಪರಿಣಾಮ ಬೀರುತ್ತದೆ. ಎಸೆಯಲ್ಪಟ್ಟ ಮರ, ಲೋಹದ ತುಂಡುಗಳು ಅಥವಾ ಪ್ರಕೃತಿಯಲ್ಲಿ ಕಂಡುಬರುವ ಯಾವುದೇ ಹಗುರವಾದ ವಸ್ತುವನ್ನು ಬಳಸಿ ಗಾಳಿ ಗಂಟೆ (wind chimes)ಗಳನ್ನು ತಯಾರಿಸುವ ಮತ್ತು ಸ್ಥಾಪಿಸುವ ಮೂಲಕ ಇದನ್ನು ಮಾಡಬಹುದು.

ಕ್ಸೈಲೋಫೋನ್‌ಗಳ ಮಾದರಿಯಲ್ಲಿ ತಮ್ಮದೇ ಆದ ಉಪಕರಣಗಳನ್ನು ತಯಾರಿಸಲು, ವಿವಿಧ ವಸ್ತುಗಳಿಂದ ಉತ್ಪತ್ತಿಯಾಗುವ ಶಬ್ದಗಳನ್ನು ಅನ್ವೇಷಿಸಲು ಮಕ್ಕಳೊಂದಿಗೆ ಸರಳ ಪ್ರಯೋಗಗಳನ್ನು ನಡೆಸಬಹುದು. ಮಕ್ಕಳು ಒರಟಾದ, ನುಣುಪಾದ ಹಾಗೂ ಇನ್ನಿತರ ವಿಭಿನ್ನ ಮಾದರಿಯ ಮೇಲ್ಮೈಗಳನ್ನು ಸ್ಪರ್ಶಿಸಲು ಇಷ್ಟಪಡುತ್ತಾರೆ, ವಿಭಿನ್ನ ಮೇಲ್ಮೈಗಳಲ್ಲಿ ಶಬ್ದ ಮತ್ತು ಲಯವನ್ನು ಶೋಧಿಸಲು ಬಯಸುತ್ತಾರೆ. ಹಾಗಾಗಿ ಶಾಲೆಯ ಆವರಣದಲ್ಲಿ ವಿಶೇಷ ಮೇಲ್ಮೈಗಳನ್ನು ರಚಿಸಬಹುದು, ಅಲ್ಲಿ ಮಕ್ಕಳು ಪ್ರಕೃತಿಯೊಂದಿಗೆ ಸಂಬಂಧ ಹೊಂದಿರುವ ಶಬ್ದಗಳನ್ನು ಶೋಧಿಸಬಹುದು. ಒಣಗಿದ ಕೊಂಬೆಗಳು, ಪೈನ್ ಮರದ ಶಂಖುಗಳು, ಸೋರೆಬುರುಡೆಯಂಥ ಬೀಜಕೋಶಗಳು ಮತ್ತು ವಿವಿಧ ವಿನ್ಯಾಸ ಮತ್ತು ಮಾದರಿಗಳನ್ನು ಹೊಂದಿರುವ ಅನೇಕ ಇತರೆ ನೈಸರ್ಗಿಕ ರೂಪಗಳಿಂದ ಕಲಾಕೃತಿಗಳನ್ನು ರಚಿಸಬಹುದು. ಇವು ಹಗುರವಾಗಿದ್ದರೆ, ಗಾಳಿಯಲ್ಲಿ ಓಲಾಡುವ ಮತ್ತು ಚಲಿಸುವ ಗಾಳಿಗಂಟೆಗಳನ್ನಾಗಿ ತೂಗಿಬಿಡಬಹುದು.

## ಸಮಗ್ರ ಅನುಭವವಾಗಿ 'ಕಲೆ'.

ಮೇಲಿನ ಈ ಉದಾಹರಣೆಗಳು ಅನುಭವದ ಕಲಿಕೆಯನ್ನು ಬೆಂಬಲಿಸುತ್ತವೆ. ಪ್ರತಿ ಮಗುವಿನ ಅನುಭವದ ತೀವ್ರತೆ, ಪ್ರಭಾವ ಮತ್ತು ಪರಿಣಾಮಕಾರಿತ್ವದ ಆಧಾರದಲ್ಲಿ ಅವು ಬದಲಾಗಬಹುದು. ಆದಾಗ್ಯೂ, ತರಗತಿಯ ಹೊರಗಿನ ಕಲಿಕೆಯ ಜೊತೆಗೆ ಅವು ವೈವಿಧ್ಯಮಯ ಕಲಿಕೆಯ ಸಾಮರ್ಥ್ಯ (ಅಥವಾ ಬಹುವಿಧ ಬುದ್ಧಿಮತ್ತೆ) ಹೊಂದಿರುವ ಮಕ್ಕಳಿಗೆ ಅವಕಾಶಗಳನ್ನು ವಿಸ್ತರಿಸುತ್ತವೆ. ಕಲೆ ಮತ್ತು ಕಲಾ ಶಿಕ್ಷಣದ ಪ್ರಮುಖ ಉದ್ದೇಶಗಳು ನಮ್ಮ ಎಲ್ಲಾ ಇಂದ್ರಿಯಗಳನ್ನು ಜಾಗೃತಗೊಳಿಸುವುದು, ನಮ್ಮ ಸುತ್ತಲಿನ ಎಲ್ಲಾ ರೀತಿಯ ಜೀವನ ಶೈಲಿಯ ಬಗ್ಗೆ ಸಹಾನುಭೂತಿಯನ್ನು ಬೆಳೆಸುವುದು ಹಾಗೂ ಗಟ್ಟಿಯಾದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವ ಕಲ್ಪಿಸಿಕೊಳ್ಳುವ ಸೃಜನಶೀಲ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು.ಕಲೆಯು ಮಕ್ಕಳಿಗೆ ತಾದಾತ್ಮ್ಯ ಹಾಗೂ ಆನಂದದಾಯಕ ಅನುಭವಗಳನ್ನು ಸೃಷ್ಟಿಸುವ ಸಾಧನವಾಗಿದೆ. ಇದು ಅವರ ಕಲಿಕೆಯ ಮೇಲೆ ದೀರ್ಘಾವಧಿಯ ಪರಿಣಾಮವನ್ನು ಉಂಟುಮಾಡಬಹುದು. ಇಂದಿನ ಬಹುತೇಕ ವೈಜ್ಞಾನಿಕ ಆವಿಷ್ಕಾರಗಳು ಕಾದಂಬರಿ, ಸಿನಿಮಾ ಮತ್ತು ಕಲೆಯಲ್ಲಿ ತಮ್ಮ ಮೂಲ ಬೀಜಗಳನ್ನು ಹೊಂದಿವೆ. ತಾಂತ್ರಿಕ ಕೌಶಲಗಳ ಹಾಗೂ ಸೌಂದರ್ಯ ಪ್ರಜ್ಞೆಯುಳ್ಳ ಪಾಂಡಿತ್ಯವನ್ನೂ ಮೀರಿದ; ನಮ್ಮ ಕಲಾ ಆಲೋಚನೆಗಳನ್ನು ಹಾಗೂ ನಮ್ಮ ಕಲ್ಪನೆಯ ಹಾರಾಟವನ್ನು ವಿಸ್ತರಿಸಲು ಈ ಸಂಗತಿಯು ನಮ್ಮನ್ನು ಉತ್ತೇಜಿಸಬೇಕು.



**ಮಾಳವಿಕಾ ರಾಜ್‌ನಾರಾಯಣ್** ಅವರು ಗುಜರಾತ್‌ನ ವಡೋದರಾ ಮೂಲದ ದೃಶ್ಯ ಕಲಾವಿದೆ. 2017ರಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್ ಫೆಲೋಶಿಪ್ ಕಾರ್ಯಕ್ರಮಕ್ಕೆ ಸೇರಿದ ಅವರು ಪ್ರಸ್ತುತ ಅಜೀಂ ಪ್ರೇಮ್‌ಜಿ ಶಾಲೆಗಳಲ್ಲಿ ಕಲೆ ಮತ್ತು ಸಂಗೀತದ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಜೊತೆಗೆ ವಡೋದರಾದಲ್ಲಿ ತಮ್ಮದೇ ಆದ ಕಲಾ ಅಭ್ಯಾಸವನ್ನು ಮುಂದುವರೆಸುತ್ತಿದ್ದಾರೆ. ಇವರು ಕಲೆ ಮತ್ತು ಶಿಕ್ಷಣದ ಬಗ್ಗೆ ಬರೆಯಲು ಇಷ್ಟಪಡುತ್ತಾರೆ. ಅವರನ್ನು malavika.rajnarayan@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಕೇಶವಚಂದ್ರ** | ಪರಿಶೀಲನೆ: **ನಾಗಮಣಿ ಎಸ್.ಎನ್.**